SL. No. : FF

ಒಟ್ಟು ಪ್ರಶ್ನೆಗಳ ಸಂಖ್ಯೆ : 46 ] **CCE RR** [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 46 ] **UN-REVISED** [ Total No. of Printed Pages : 8

**ಸಂಕೇತ ಸಂಖ್ಯೆ : 62-K** **Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 04. 04. 2018 ] [ Date : 04. 04. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 46 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $10 \times 1 = 10$

1. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಮಿನಿ ಪೊಲೀಸ್ ನಗರದಲ್ಲಿ ತಮ್ಮ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಂಡರು ?
2. ರಾಜರತ್ನಂರವರು ತಿಳಿಸಿರುವಂತೆ ಕರ್ನಾಟಕದ ವಿಶಿಷ್ಟವಾದ ಗುಣ ಯಾವುದು ?
3. ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಮಾಡಿದೇನು ?
4. ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದದ್ದೇಕೆ ?
5. ನಾ. ಕಸ್ತೂರಿಯವರದು ಯಾವ ಯಾವ ಕ್ಷೇತ್ರಗಳಲ್ಲಿ ಮರೆಯಲಾಗದ ಹೆಸರು ?
6. ಯಾರು ಯಾರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ನಿಸಾರ್ ಅಹಮದ್ ಹೇಳಿದ್ದಾರೆ ?
7. ಕವಿ ಬಿ.ಆರ್. ಲಕ್ಷ್ಮಣರಾವ್‌ರವರು ಸರ್ವಶಕ್ತ ದೂತನು ಯಾವಾಗ ಅವತರಿಸುವನು ಎಂದು ಹೇಳಿದ್ದಾರೆ ?
8. ಮಕ್ಕಳಾದನಂತರ ಯಾವ ಚಿಂತೆ ಉಂಟಾಗುವುದೆಂದು ಅಂಬಿಗರ ಚೌಡಯ್ಯ ತಿಳಿಸಿದ್ದಾರೆ ?
9. ಪುಲಿಗೆರೆ ಕವಿಸೋಮನು ಯಾವ ಸಾಮರ್ಥ್ಯವುಳ್ಳವನು ಯೋಗಿಯಾಗಬೇಕೆಂದು ಬಯಸುತ್ತಾನೆ ?
10. ಶಿಲ್ಪಿ ಧರ್ಮಪದನು ಕೊನಾರ್ಕ್‌ಗೆ ಏಕೆ ಬಂದನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $10 \times 2 = 20$

11. ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?
12. ಅನಿಲ್ ಕುಂಬ್ಳೆಯವರ ಬಾಲ್ಯ ಜೀವನವನ್ನು ಕುರಿತು ಬರೆಯಿರಿ.
13. ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಕುಂಬ್ಳೆಯವರು ವಹಿಸಿದ್ದ ಪಾತ್ರವೇನು ?
14. ರಾಣಿ ಅಬ್ಬಕ್ಕ ಪೋರ್ಚುಗೀಸರನ್ನು ಸೋಲಿಸಲು ಕೈಗೊಂಡ ಕ್ರಮಗಳೇನು ?
15. ಮೊಗಲರು ಪ್ರಾಣಭೀತಿಯಿಂದ ಪಲಾಯನಗೈಯಲು ಕೆಳದಿ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳೇನು ?

16. ಕೋಗಿಲೆಯ ಗಾನದ ತರಂಗಗಳ ಪರಿಣಾಮವನ್ನು ಚೆನ್ನವೀರ ಕಣವಿಯವರು ಹೇಗೆ ವರ್ಣಿಸಿದ್ದಾರೆ ?

17. ಕವಿ ಚೆನ್ನವೀರ ಕಣವಿಯವರು ಕೋಗಿಲೆಯು ನಮಗೆ ಅಮೃತವನ್ನು ಹೇಗೆ ನೀಡಬೇಕೆಂದು ತಿಳಿಸಿದ್ದಾರೆ ?

18. ಮೋಡಗಳನ್ನು ಕಂಡಾಗ ರೈತರಿಗಾಗುವ ಸಂತೋಷವನ್ನು ಜನಪದರು ಹೇಗೆ ವರ್ಣಿಸಿದ್ದಾರೆ ?

19. ಸ್ವಾತಿ ಮಳೆಯ ಮಹತ್ವವನ್ನು ಜನಪದರು ವರ್ಣಿಸಿರುವ ಬಗೆಯನ್ನು ತಿಳಿಸಿ.

20. ವಿದ್ಯುತ್‌ತಂತಿಗಳು ತಲೆಯ ಹತ್ತಿರದಲ್ಲೇ ಹಾದು ಹೋದಾಗ ಈರಪ್ಪ ಎಂ. ಕಂಬಳಿಯವರಿಗಾದ ಅನುಭವೇನು ?

**ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ :** 2 × 3 = 6

21. "ನಾಳೆ ಕ್ಲಾಸೇನೂ ನಿಲ್ಲುವುದಿಲ್ಲ"

22. "ಹೆಂಡಿರಾದರೆ ಮಕ್ಕಳ ಚಿಂತೆ"

23. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ನಾವು ನೀವು ..........................................................

.....................................................................

.....................................................................

.......................................................... ಇಂದೆ.

***ಅಥವಾ***

ಕರ್ನಾಟಕ ..........................................................

.....................................................................

.....................................................................

.......................................................... ಒಂದೆ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

24. ಗೊರೂರು ರಾಮಸ್ವಾಮಿ ಅಯ್ಯಂಗಾರ್

25. ಬಿ.ಆರ್. ಲಕ್ಷ್ಮಣರಾವ್

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

26. ರಾಮಸಿಂಗ್ ಗುಂಡೇಟಿಗೆ ಬಲಿಯಾದಾಗ ಕುಲಕರ್ಣಿ ಹಾಗೂ ಸೋಮಣ್ಣರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

***ಅಥವಾ***

ಧ್ವಜರಕ್ಷಣೆ ನಾಟಕದಲ್ಲಿ ಬರುವ ರಾಮಸಿಂಗ್‌ನ ಪಾತ್ರವನ್ನು ಕುರಿತು ನಿಮ್ಮ ಮಾತುಗಳಲ್ಲಿ ವಿವರಿಸಿ.

27. ಪುರಂದರದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ತಿಳಿಸಿ.

***ಅಥವಾ***

'ಮುಕ್ತಿ ನಿನಗೆ ಕೇವಲ ಒಂದು ಗೇಣು ದೂರ' ಎಂಬುದನ್ನು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ವರ್ಣಿಸಿರುವ ಬಗೆಯನ್ನು ಕುರಿತು ವಿವರಿಸಿ.

## ವಿಭಾಗ – 'ಬಿ'
## (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $12 \times 1 = 12$

28. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳು

(ಎ) 5 (ಬಿ) 6

(ಸಿ) 7 (ಡಿ) 9

29. 'ಹನ್ನೆರಡು' ಎಂಬ ಪದವು ಈ ನಾಮವಾಚಕಕ್ಕೆ ಸೇರಿದೆ

(ಎ) ಗುಣವಾಚಕ (ಬಿ) ದಿಗ್ವಾಚಕ

(ಸಿ) ಸಂಖ್ಯಾವಾಚಕ (ಡಿ) ಪರಿಮಾಣವಾಚಕ

30. 'ಜಾನ್ ಊಟವನ್ನು ಮಾಡಿದನು' — ಈ ವಾಕ್ಯದಲ್ಲಿರುವ ಕ್ರಿಯಾಪದದ ಕಾಲ ರೂಪ

(ಎ) ವರ್ತಮಾನಕಾಲ (ಬಿ) ಭೂತಕಾಲ

(ಸಿ) ಭವಿಷ್ಯತ್‌ಕಾಲ (ಡಿ) ಅಪೂರ್ಣ ಭವಿಷ್ಯತ್‌ಕಾಲ

31. 'ಕಪ್ಪಕಾಣಿಕೆ' — ಈ ಪದದ ವ್ಯಾಕರಣಾಂಶ

(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

(ಸಿ) ಜೋಡುನುಡಿ (ಡಿ) ನುಡಿಗಟ್ಟು

32. 'ಜನರೊಪ್ಪದೆ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಲೋಪ (ಬಿ) ಯಕಾರಾಗಮ

(ಸಿ) ವಕಾರಾಗಮ (ಡಿ) ಆದೇಶ

33. 'ಮೂಡಣ' — ಪದದ ಸಮಾನಾರ್ಥಕ ಪದ

(ಎ) ಪೂರ್ವ (ಬಿ) ಪಶ್ಚಿಮ

(ಸಿ) ಉತ್ತರ (ಡಿ) ದಕ್ಷಿಣ

34. 'ವೈಶಾಖ' — ಪದದ ತದ್ಭವ ರೂಪ

(ಎ) ಬ್ಯಾಸಕಿ (ಬಿ) ಬೆಸಿಗೆ

(ಸಿ) ಬೇಸಗೆ (ಡಿ) ಬೆಸುಗೆ

35. 'ಕಾಡುಗಳು ಬೆಂಕಿ ಹೊತ್ತಿಕೊಂಡಾಗ ಧಗಧಗನೆ ಉರಿದುಹೋದವು.' — ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ

(ಎ) ಕಾಡುಗಳು (ಬಿ) ಧಗಧಗನೆ

(ಸಿ) ಬೆಂಕಿ (ಡಿ) ಉರಿದು ಹೋದವು

36. 'ಅಕ್ಷರವೆಂಬುದು ಅಲ್ಲಾದೀನನ ಅದ್ಭುತ ಮಾಯಾದೀಪ' — ವಾಕ್ಯದಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ

(ಸಿ) ಉತ್ಪ್ರೇಕ್ಷಾಲಂಕಾರ (ಡಿ) ದೃಷ್ಟಾಂತಾಲಂಕಾರ

37. 'ಕಸಕಡ್ಡಿ' — ಪದವು ಈ ಸಮಾಸಕ್ಕೆ ಸೇರಿದೆ

(ಎ) ಅಂಶೀ ಸಮಾಸ (ಬಿ) ದ್ವಿಗು ಸಮಾಸ

(ಸಿ) ದ್ವಂದ್ವ ಸಮಾಸ (ಡಿ) ಕ್ರಿಯಾ ಸಮಾಸ

38. ಬರವಣಿಗೆಯಲ್ಲಿ ಪಾರಿಭಾಷಿಕ / ಪ್ರಧಾನ / ವಿಶಿಷ್ಟ ಪದಗಳನ್ನು ಬಳಸುವಾಗ ಉಪಯೋಗಿಸುವ ಲೇಖನ ಚಿಹ್ನೆ

(ಎ) ಭಾವಸೂಚಕ (ಬಿ) ವಾಕ್ಯವೇಷ್ಟನ

(ಸಿ) ಉದ್ಧರಣ (ಡಿ) ಆವರಣ

39. 'ಕಟ್ಟಡಕ್ಕೆ' — ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ತೃತೀಯಾ (ಡಿ) ಚತುರ್ಥೀ

## ವಿಭಾಗ – 'ಸಿ'
## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ಭಾಷೆಯು ಸಂವಹನ ಮಾಧ್ಯಮ. ಇದು ಮಾತು ಮತ್ತು ಬರೆಹದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಮಾತಿನ ಸಾಂಕೇತಿಕ ರೂಪವೇ ಬರೆಹ. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಬೇರೆ ಭಾಷೆಗಳಿಂದ ಪ್ರಭಾವಿತವಾಗಿದ್ದರೂ ತನ್ನ ಸ್ವಂತಿಕೆಯನ್ನು ಬಿಟ್ಟಿಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಭಾಷೆ ತನ್ನ ಸುತ್ತಲಿನವರೊಂದಿಗೆ ವ್ಯವಹರಿಸಲು ಮತ್ತು ವಿಚಾರ ವಿನಿಮಯ ಮಾಡಲು ಮನುಷ್ಯನಿಗೆ ಒಂದು ಅಮೂಲ್ಯ ಸಾಧನವಾಗಿದೆ. ಈ ಭಾಷೆಯ ಉಗಮ ಯಾವಾಗ ಮತ್ತು ಹೇಗಾಯಿತೆಂದು ಹೇಳುವುದು ಕಷ್ಟ. ಆದರೆ ಮನುಷ್ಯನು ತನ್ನ ಮೇಧಾಶಕ್ತಿಯಿಂದ ಭಾಷೆಯನ್ನು ಬಳಸುತ್ತಿರುವುದರಿಂದ ಈ ಜಂಗಮ ಜಗತ್ತಿನಲ್ಲಿ ಇತರೆ ಜೀವಿಗಳಿಗಿಂತ ಭಿನ್ನನಾಗಿದ್ದಾನೆ.

*ಪ್ರಶ್ನೆಗಳು :*

40. ಭಾಷೆಯು ಅಭಿವ್ಯಕ್ತವಾಗುವ ರೂಪಗಳು ಯಾವುವು ?

41. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಎಷ್ಟು ವರ್ಷಗಳ ಇತಿಹಾಸವಿದೆ ?

42. ಭಾಷೆಯು ಮನುಷ್ಯನಿಗೆ ಹೇಗೆ ಅಮೂಲ್ಯವಾದ ಸಾಧನವಾಗಿದ ?

43. ಮನುಷ್ಯನು ಇತರೆ ಜೀವಿಗಳಿಗಿಂತ ಹೇಗೆ ಭಿನ್ನನಾಗಿದ್ದಾನೆ ?

44. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** 1 × 3 = 3

* ಹಾಸಿಗೆಯಿದ್ದಷ್ಟು ಕಾಲು ಚಾಚು
* ದೇಶ ಸುತ್ತು; ಕೋಶ ಓದು
* ಕೈಕೆಸರಾದರೆ ಬಾಯಿ ಮೊಸರು

45. ನಿಮ್ಮನ್ನು ತಿಪಟೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಶ್ವಿನ್ / ಅಕ್ಷತಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಶಿಕ್ಷಕರ ದಿನಾಚರಣೆ'ಯನ್ನು ಕುರಿತು ಹಾಸನದಲ್ಲಿರುವ ನಿಮ್ಮ ತಾಯಿಯವರಿಗೊಂದು ಪತ್ರವನ್ನು ಬರೆಯಿರಿ. 1 × 4 = 4

**ಅಥವಾ**

ನಿಮ್ಮನ್ನು ತುಮಕೂರಿನ ನಿವಾಸಿ 'ಧೃವಂತ್ / ಧನ್ಯಶ್ರೀ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಹಾಳಾಗಿರುವ ರಸ್ತೆಗಳನ್ನು ದುರಸ್ತಿಪಡಿಸುಂತೆ ಕೋರಿ, ನಗರಸಭಾ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ.

46. **ಈ ಕೆಳಗಿನ ಯಾವುದಾದರೂ ಒಂದು ವಿಷಯದ ಬಗ್ಗೆ ಹತ್ತು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** 1 × 4 = 4

* ಪರಿಸರ ಮಾಲಿನ್ಯ ಮತ್ತು ಸಂರಕ್ಷಣೆ
* ಕ್ರೀಡೆಗಳು ಮತ್ತು ಅವುಗಳ ಮಹತ್ವ
* ದಿನಪತ್ರಿಕೆಗಳಿಂದಾಗುವ ಪ್ರಯೋಜನಗಳು